# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** 1125
**ಸದಸ್ಯರ ಹೆಸರು :** ಶ್ರೀ ರವಿಕುಮಾರ್ ಎನ್
(ವಿಧಾನಸಭೆಯಿಂದ ಚುನಾಯಿತರಾದವರು)
**ಉತ್ತರಿಸುವ ದಿನಾಂಕ :** 15.12.2023
**ಉತ್ತರಿಸುವ ಸಚಿವರು :** ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರ ಸೇರಿದಂತೆ ರಾಜ್ಯಾದ್ಯಂತ ಇರುವ ಹಲವಾರು ಮಾಲ್‌ಗಳಲ್ಲಿ ಕನ್ನಡದಲ್ಲಿ ಪ್ರಧಾನವಾಗಿ ನಾಮಫಲಕ ಅಳವಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಯಾವ ಕ್ರಮಕೈಗೊಂಡಿದೆ; | ಬಂದಿರುವುದಿಲ್ಲ. |
| (ಆ) | ಅಂಗಡಿ ಮತ್ತು ಇತರ ವಾಣಿಜ್ಯ ಸಂಸ್ಥೆಗಳ ಲೈಸೆನ್ಸ್ ನವೀಕರಣದ ಸಮಯದಲ್ಲಿ ಕನ್ನಡವನ್ನು ಪ್ರಧಾನವಾಗಿ ನಾಮಫಲಕ ಅಳವಡಿಸಿದಲ್ಲಿ ಮಾತ್ರವೇ ನವೀಕರಿಸಲಾಗುವುದು ಎಂಬ ನಿಯಮ ಜಾರಿಗೆ ತರುವ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಅಂಗಡಿ ಮತ್ತು ಇತರ ವಾಣಿಜ್ಯ ಸಂಸ್ಥೆಗಳಿಗೆ ಪರವಾನಗಿ ನೀಡುವಾಗ ಅಗ್ರಸ್ಥಾನದಲ್ಲಿ ಕನ್ನಡ ನಾಮಫಲಕ ಅಳವಡಿಸಲು ಸುತ್ತೋಲೆ ಸಂಖ್ಯೆ: ಸಅಇ/58/ಎಸಿಟಿ/2002, ದಿನಾಂಕ:27.04.2002ರಂದು ಮತ್ತು ಸುತ್ತೋಲೆ ಸಂಖ್ಯೆ: ಕಸಂವಾ/89/ಕೆಓಎಲ್/2017, ದಿನಾಂಕ:24.03.2018ರನ್ವಯ ಆಯಾ ಸಂಬಂಧಪಟ್ಟ ಇಲಾಖೆಯು ಕ್ರಮವಹಿಸಲು ಆದೇಶವನ್ನು ಹೊರಡಿಸಲಾಗಿರುತ್ತದೆ.<br>ಅಂಗಡಿ ಮತ್ತು ಇತರ ವಾಣಿಜ್ಯ ಸಂಸ್ಥೆಗಳ ಲೈಸೆನ್ಸ್ ನವೀಕರಣದ ಸಮಯದಲ್ಲಿ ಕನ್ನಡವನ್ನು ಪ್ರಧಾನವಾಗಿ ನಾಮಫಲಕದಲ್ಲಿ ಅಳವಡಿಸಿದಲ್ಲಿ ಮಾತ್ರವೇ ನವೀಕರಿಸಲಾಗುವುದು ಎಂಬ ಬಗ್ಗೆ ಪ್ರಸ್ತಾವನೆಯು ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. |
| (ಇ) | ಹಲವಾರು ಬಹುಮಹಡಿ ವಸತಿ ಸಂಕೀರ್ಣದ ಸೊಸೈಟಿಗಳ ಪದಾಧಿಕಾರಿಗಳು ಕನ್ನಡೇತರರಾಗಿರುವ ಕಾರಣಕ್ಕಾಗಿ ಕನ್ನಡವನ್ನು ವಾರ್ಷಿಕ ಸಭೆಯ ನಡವಳಿಯಲ್ಲಿ ಹಾಗೂ ದೈನಂದಿನ ವ್ಯವಹಾರದಲ್ಲಿ ಕನ್ನಡವನ್ನು ಬಳಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯದಲ್ಲಿ ವಾಸಿಸುತ್ತಿರುವ ಅನ್ಯ ಭಾಷಿಕರಿಗೆ ಕನ್ನಡ ಕಲಿಸಲು ಸರ್ಕಾರ ಕೈಗೊಂಡ ಯೋಜನೆಗಳು ಯಾವುವು | ಬಂದಿರುವುದಿಲ್ಲ.<br>ಕನ್ನಡ ಕಲಿಯಲು ಆಸಕ್ತಿ ತೋರುವ ರಾಜ್ಯದಲ್ಲಿರುವ ಅನ್ಯಭಾಷಿಕರ ಕೋರಿಕೆಯ ಮೇರೆಗೆ ಸಂಘ-ಸಂಸ್ಥೆಗಳು/ಇಲಾಖೆ/ ಕೇಂದ್ರ ಸ್ವಾಮ್ಯದ ಕಛೇರಿಗಳಲ್ಲಿರುವ ಅನ್ಯಭಾಷಿಕರಿಗೆ ಕನ್ನಡ ಕಲಿಸುವ ತರಗತಿಗಳನ್ನು ನಿರಂತರವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ನಡೆಸಲಾಗುತ್ತಿದೆ. |

**ಸಂಖ್ಯೆ**.ಕಸಂವಾ 141 ಕೆಓಎಲ್ ಆಕ 2023

**(ಶಿವರಾಜ್ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು